# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## ಪರೀಕ್ಷಾ ವಿಭಾಗ

ಫೋನ್ ನಂ. :0831-2565207/237
ಫ್ಯಾಕ್ಸ್ : 0831-2565240

Website: www.rcub.ac.in
E-mail: rcuregev@gmail.com


## 2019-20ನೇ ಸಾಲಿನ ಪರೀಕ್ಷೆ ನಡೆಸಲು ಮಾರ್ಗಸೂಚಿಗಳು

1. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರ ಆವರಣ ಹಾಗೂ ವಸತಿಗೃಹಗಳನ್ನು ಪರೀಕ್ಷೆಗೂ ಮೊದಲು ಸ್ಯಾನಿಟೈಸ್ ಮಾಡುವುದು. ಪರೀಕ್ಷಾ ಸಮಯ ಪ್ರಾರಂಭದಿಂದ ಮುಕ್ತಾಯಗೊಳ್ಳುವವರೆಗೆ ಅಧ್ಯಾಪಕರು/ಮೇಲ್ವಿಚಾರಕರು/ಇತರ ಪರೀಕ್ಷಾ ಸಿಬ್ಬಂಧಿ ಮಾಸ್ಕ ಧರಿಸುವುದು ಕಡ್ಡಾಯವಾಗಿರುತ್ತದೆ.
2. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರ ಅಥವಾ ವಸತಿಗೃಹವನ್ನು ಜಿಲ್ಲಾಡಳಿತ ಕ್ವಾರಂಟೈನ್‌ಗೆ ಬಳಸಿಕೊಂಡಿದ್ದಲ್ಲಿ ಪರೀಕ್ಷೆ ಪ್ರಾರಂಭಕ್ಕೂ ಮುನ್ನ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಆವರಣ ಹಾಗೂ ವಸತಿಗೃಹವನ್ನು ಮರಳಿ ಪಡೆಯಲು ಕ್ರಮ ಕೈಗೊಳ್ಳುವುದು.
3. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರವು ಕಂಟೇನ್‌ಮೆಂಟ್ ಏರಿಯಾದಲ್ಲಿ ಬರುತ್ತಿದ್ದಲ್ಲಿ ಅಥವಾ ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಕಂಟೇನ್‌ಮೆಂಟ್ ಏರಿಯಾವೆಂದು ಗುರುತಿಸಲ್ಪಟ್ಟಲ್ಲಿ ಅಂತಹ ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರು ಸ್ಥಳೀಯ ಆರೋಗ್ಯ ಇಲಾಖೆಯ ಗಮಕ್ಕೆ ತಂದು ಪರೀಕ್ಷೆಯ ಪೂರ್ವ ಸಿದ್ದತೆ ಮಾಡಿಕೊಳ್ಳುವುದು ಮತ್ತು ತಕ್ಷಣ ವಿಶ್ವವಿದ್ಯಾಲಯಕ್ಕೆ ವರದಿ ನೀಡುವುದು.
4. ಪ್ರತಿಯೊಂದು ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದಲ್ಲೂ ಒಂದು ಕೊಠಡಿಯನ್ನು ಪರ್ಯಾಯ ಕ್ವಾರಂಟೈನ್ ವ್ಯವಸ್ಥೆಗಾಗಿ ಬಳಸಲು ತಯಾರಿಯಲ್ಲಿಟ್ಟುಕೊಳ್ಳುವುದು. ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಕೋರೋನಾ ಶಂಕೆ ಕಂಡುಬಂದಲ್ಲಿ ಅಂತಹವರನ್ನು ಈ ಕೋಣೆಗೆ ವರ್ಗಾಯಿಸಿ ಅಂತರವನ್ನು ಕಾಪಾಡುವುದು ಮತ್ತು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರುವುದು.
5. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಒಬ್ಬ ಕೋವಿಡ್-19 ನೋಡೆಲ್ ಅಧಿಕಾರಿಯನ್ನು ನೇಮಕ ಮಾಡುವುದು. ಸದರಿ ಅಧಿಕಾರಿಯು ಕೋವಿಡ್-19 ಸಂಬಂಧಿಸಿದ ಮಾಹಿತಿಯನ್ನು ಪ್ರಾಂಶುಪಾಲರ ಮುಖಾಂತರ ವರದಿ ಸಲ್ಲಿಸುವುದು.
6. ಇತರೆ ರಾಜ್ಯದ ವಿದ್ಯಾರ್ಥಿಗಳು ತಮ್ಮ ಸ್ವಂತ ಊರಿಗೆ ಈಗಾಗಲೇ ಹೋಗಿದ್ದಲ್ಲಿ ಅಂತಹವರು ಪರೀಕ್ಷೆಯ ಪ್ರಾರಂಭಕ್ಕೂ ಮುನ್ನ ಆಗಮಿಸಿ ಕರ್ನಾಟಕ ಸರ್ಕಾರದ ನಿಯಮದಂತೆ ಸಾಂಸ್ಥಿಕ ಹಾಗೂ ಗೃಹ ಕ್ವಾರಂಟೈನ್ ಅವಧಿಯನ್ನು ಯಶಸ್ವಿಯಾಗಿ ಮುಗಿಸಿಕೊಳ್ಳುವುದು ಅವರ ಜವಾಬ್ದಾರಿಯಾಗಿರುತ್ತದೆ. ಸದರಿ ಕಾಲೇಜಿನ ಪ್ರಾಂಶುಪಾಲರು ಇಂತಹ ವಿದ್ಯಾರ್ಥಿಗಳ ಬಗ್ಗೆ ಅವಶ್ಯವಾಗಿ ನಿಗಾವಹಿಸುವುದು.
7. ಕಂಟೇನ್‌ಮೆಂಟ್ ಏರಿಯಾಗಳಿಂದ ಬರುವ ಸಿಬ್ಬಂದಿಗಳನ್ನು ಹಾಗೂ ಕ್ವಾರಂಟೈನಲ್ಲಿರುವ ಸಿಬ್ಬಂದಿಗಳನ್ನು ಪರೀಕ್ಷಾ ಕಾರ್ಯಕ್ಕೆ ಬಳಸಕೊಡದು.
8. ವಿದ್ಯಾರ್ಥಿಗಳು/ಪರೀಕ್ಷಾ ಸಿಬ್ಬಂದಿ ನೆಗಡಿ, ಕೆಮ್ಮು, ಜ್ವರ, ಉಸಿರಾಟದ ತೊಂದರೆಯಿಂದ ಬಳಲುತಿದ್ದಲ್ಲಿ ನೋಡಲ್ ಅಧಿಕಾರಿಯವರು ಸೂಕ್ತ ಕ್ರಮ ಕೈಗೊಳ್ಳುವುದು.

9. ಪ್ರಾಧ್ಯಾಪಕರು/ಮೇಲ್ವಿಚಾರಕರು/ವಿದ್ಯಾರ್ಥಿಗಳು ಹಾಗೂ ಎಲ್ಲ ಪರೀಕ್ಷಾ ಸಿಬ್ಬಂದಿ ಆರೋಗ್ಯ ಸೇತು ಆ್ಯಪ್ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಪರೀಕ್ಷೆಯ ಪ್ರಾರಂಭವಾಗುವ ಮುನ್ನ ಕೊಠಡಿ ಮೇಲ್ವಿಚಾರಕರು Thermal Scanner ಮೂಲಕ ವಿದ್ಯಾರ್ಥಿಗಳ ದೇಹದ ತಾಪಮಾನ ಪರೀಕ್ಷಿಸಿ ಸುರಕ್ಷಿತವಾಗಿರುವುದನ್ನು ಧೃಢೀಕರಿಸಿಕೊಳ್ಳುವುದು.
10. ಕಾಲೇಜು/ಸ್ನಾತಕೋತ್ತರ ವಿಭಾಗ/ಸ್ನಾತಕೋತ್ತರ ಕೇಂದ್ರದಲ್ಲಿನ ಶೌಚಾಲಯದಲ್ಲಿ ವಾಶ್ ಬೇಸಿನ್ ಹತ್ತಿರ ಹ್ಯಾಂಡ್ ವಾಶ್‌ಗೆ ವ್ಯವಸ್ಥೆ ಮಾಡುವುದು.
11. ವಿದ್ಯಾರ್ಥಿಯ/ವಿದ್ಯಾರ್ಥಿನಿಯರು ಹಾಗೂ ಪರೀಕ್ಷಾ ಸಿಬ್ಬಂದಿ ತಮ್ಮದೇ ನೀರಿನ ಬಾಟಲ್ ಹಾಗೂ ಊಟ/ತಿಂಡಿಯನ್ನು ತೆಗೆದುಕೊಂಡು ಬರುವುದು.
12. ವಿದ್ಯಾರ್ಥಿಯ/ವಿದ್ಯಾರ್ಥಿನಿಯರು ತಮ್ಮ ಪೆನ್ನು, ವೈಯಕ್ತಿಕ ಸ್ಯಾನಿಟೈಸರ್ ಹಾಗೂ ಇತರೆ ಪರೀಕ್ಷಾ ಸಾಮಗ್ರಿಗಳನ್ನು ಇನ್ನೊಬ್ಬರೊಡನೆ ಹಂಚಿಕೊಳ್ಳುವಂತಿಲ್ಲ ಮತ್ತು ವಿದ್ಯಾರ್ಥಿಗಳು ಪರೀಕ್ಷಾ ಅವಧಿಯಲ್ಲಿ ಮಾಸ್ಕ ತೆರೆಯದಂತೆ ಎಚ್ಚರಿಕೆ ವಹಿಸುವುದು.
13. ಮಹಾವಿದ್ಯಾಲಯದಲ್ಲಿ ಡೆಸ್ಕ್‌ಗಳ ಗಾತ್ರ ನಾಲ್ಕು ಅಡಿಗಿಂತ ದೊಡ್ಡದಾಗಿದ್ದಲ್ಲಿ ಒಂದು ಮೀಟರ್ ಅಂತರವಿಟ್ಟು ಪ್ರತಿ ಡೆಸ್ಕ್ ಗೆ ಇಬ್ಬರು ವಿದ್ಯಾರ್ಥಿಗಳನ್ನು ಕೂರಿಸಲು ಅವಕಾಶ ನೀಡಬಹುದು. ಇಲ್ಲವಾದಲ್ಲಿ ಒಂದು ಬೆಂಚಿಗೆ ಒಬ್ಬ ವಿದ್ಯಾರ್ಥಿಯನ್ನು ಮಾತ್ರ ಕೂಡಿಸುವುದು. ಪರೀಕ್ಷಾ ಕೊಠಡಿಯಲ್ಲಿ ಸ್ವಚ್ಛ ಗಾಳಿ ಬೆಳಕು ಇರುವಂತೆ ನೋಡಿಕೊಳ್ಳುವುದು.
14. ರಿಜಿಸ್ಟಾರ್/ಹಾಜರಾತಿ/ ಪ್ರಶ್ನೆಪತ್ರಿಕೆ/ ಉತ್ತರ ಪತ್ರಿಕೆಗಳನ್ನು ವಿತರಿಸುವ ಮುನ್ನ ಹಾಗೂ ನಂತರ ಕಾಲೇಜಿನ ಮುಖ್ಯಸ್ಥರು ಹಾಗೂ ಅಧ್ಯಾಪಕರು/ಮೇಲ್ವಿಚಾರಕರು ಕೈಯನ್ನು ಶುಚಿಗೊಳಿಸುವುದು ಕಡ್ಡಾಯವಾಗಿ ಅವಶ್ಯವಾಗಿದೆ.
15. ಪರೀಕ್ಷಾ ಅವಧಿಯಲ್ಲಿ ಒಬ್ಬ ಮಹಿಳಾ ಸಿಬ್ಬಂದಿ ಅಗತ್ಯವಾಗಿ ಇರಬೇಕು.
16. ಪ್ರತಿಯೊಂದು ಪರೀಕ್ಷೆ ಮುಗಿದ ಕೂಡಲೇ ಎಲ್ಲಾ ಬೆಂಚುಗಳನ್ನು ಸ್ಯಾನಿಟೈಸರ್‌ನಿಂದ ಸಿಂಪಡಿಸಿ ಸ್ವಚ್ಛಗೊಳಿಸುವುದು ಮತ್ತು ಆಗಿಂದಾಗ್ಗೆ ಸ್ಯಾನಿಟೈಸರ್‌ನಿಂದ ಕೈಗಳನ್ನು ಸ್ವಚ್ಛ ಮಾಡಿಕೊಳ್ಳುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು.
17. ಕೋವಿಡ್-19 ಹಿನ್ನೆಲೆಯಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರವು ಹೊರಡಿಸಿರುವ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಪಾಲಿಸುವುದು.

31/8

**ಕುಲಸಚಿವರು(ಮೌಲ್ಯಮಾಪನ)**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಗೆ,**

ವಿಭಾಗಗಳ ಮುಖ್ಯಸ್ಥರು/ ಪ್ರಾಚಾರ್ಯರು/ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

**ಪ್ರತಿಗಳು**

1. ಮಾನ್ಯ ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
2. ಕಛೇರಿ ಪ್ರತಿ.